## ಇಂಗ್ಲಿಷ್ ಅವಾಂತರ

ಮೊನ್ನೆ ಮೊನ್ನೆಯಷ್ಟೇ ಅಷ್ಟೇನೂ ಪರಿಚಯವಿಲ್ಲದ, ಇತ್ತೀಚೆಗಷ್ಟೇ ಮದುವೆಯಾಗಿದ್ದ ಫೇಸ್‌ಬುಕ್ ಗೆಳೆಯನೊಬ್ಬ ತನ್ನ ಹೆಂಡತಿಯ ಫೋಟೊ ಹಾಕಿ 'ಐ ಲವ್ ಮೈ ಬ್ಯೂಟಿಫುಲ್ ವೈಫ್' ಅಂತ ಇಂಗ್ಲಿಷ್‌ನಲ್ಲಿ ಬರೆದುಕೊಂಡಿದ್ದ. ಅದನ್ನು ನೋಡಿ ತಕ್ಷಣ ನನ್ನ ಮಡದಿಯ ಮೇಲಿನ ಪ್ರೇಮ ನೆನಪಾಗಿ ನಾನೇನು ಕಮ್ಮಿ, ನಾನೂ ಕೂಡ ನನ್ನ ಹೆಂಡತಿಯನ್ನು ಅಷ್ಟೇ ಪ್ರೀತಿಸುತ್ತೇನೆ ಅಂತ ಇಂಗ್ಲಿಷಿನಲ್ಲಿ ಬರೆಯಲು ಹೆಣಗಾಡಿ ಅದು ಸಾಧ್ಯವಾಗದೆ ಸಿಂಪಲ್ಲಾಗಿ, 'ಮೀ ಟೂ...' ಅಂತ ಇಂಗ್ಲೀಷಿನಲ್ಲಿ ಬರೆದು ಕಮೆಂಟು ಹಾಕಿದ್ದೆ. ಹತ್ತು ನಿಮಿಷಗಳಲ್ಲಿ ಆ ಪೋಸ್ಟು, ನನ್ನ ಕಮೆಂಟು ಎರಡೂ ಕಾಣದಾಗಿತ್ತು. ಆ ಗೆಳೆಯನ ಪ್ರೊಫೈಲ್ ಹುಡುಕಿದರೆ ಅದೂ ನಾಪತ್ತೆ. ಆಮೇಲೆ ನನಗೆ ಗೊತ್ತಾದ ಕರಾಳ ಸತ್ಯವೆಂದರೆ ಅವನು ಅಪಾರ್ಥ ಮಾಡಿಕೊಂಡು ನನ್ನನ್ನು ಬ್ಲಾಕ್ ಮಾಡಿಬಿಟ್ಟಿದ್ದ!



**ಗೊರೂರು ನಾಗ**



ಕಲೆ: ಗಣೇಶ ಆಚಾರ್ಯ

## 'ಮೊಂಡು' ರಾಗ

ನನ್ನ ಮೊಮ್ಮಗಳು ಅನನ್ಯ ಆನ್‌ಲೈನ್‌ನಲ್ಲಿ ಸಂಗೀತ ಕಲಿಯುತ್ತಿದ್ದಾಳೆ. ಸಂಗೀತ ಎಂದರೆ ಅವಳಿಗೆ ತುಂಬಾ ಆಸಕ್ತಿ. ಅಷ್ಟೇ ಚುರುಕು ಹುಡುಗಿ. ಆದರೆ, ಸ್ವಲ್ಪ ಮೊಂಡು ಸ್ವಭಾವ. ಅವಳನ್ನು ಕೆಲವೊಮ್ಮೆ ಮುದ್ದಿನಿಂದ 'ಮೊಂಡು' ಎಂದೇ ಕರೆಯುತ್ತೇನೆ. ಒಮ್ಮೆ ಸಂಗೀತ ಪಾಠ ಮುಗಿಸಿ ಬಂದ ಕೂಡಲೇ, 'ಅಮ್ಮಮ್ಮ, ನೀವು ನನ್ನನ್ನ ಮೊಂಡು ಎಂದೇ ಕರೀತಾ ಇದ್ರಿ ಅಲ್ಲ? ಇವತ್ತು ಮೇಡಂ ಕೂಡ ನನಗೆ ಮೊಂಡು ಹೇಳಿ ಕೊಡ್ತೀನಿ ಅಂದ್ರು' ಎಂದಳು. 'ನೋಡು, ನೀನು ಮೊಂಡು ಅಂತ ಅವರಿಗೂ ಗೊತ್ತಾಯ್ತು' ಎಂದು ಛೇಡಿಸಿದೆ. ನನಗೂ ಸ್ವಲ್ಪ ಸಂಗೀತ ಜ್ಞಾನ ಇರೋದರಿಂದ ಹೇಳಿದೆ, 'ಅದೊಂದು ರಾಗದ ಹೆಸರು, ಮೊಂಡು ಅಲ್ಲ, ಮಾಂಡ್'. 'ಓ, ನಾನು ಮೊಂಡಿ, ಅದು ಮಾಂಡ್ ಅಷ್ಟೆ ವ್ಯತ್ಯಾಸ' ಎಂದು ನಕ್ಕಳು.

**ವೀಣಾ ಶಂಕರ್**